**ದಿನಾಂಕಃ 04/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ವಾದಿ ಪರ ಶ್ರೀ. ಹೆಚ್ ಆರ್ ಎಂ ವಕೀಲರಿಂದಃ**

1. ನನ್ನ ಗಂಡನ ಹೆಸರು ಹೆಚ್ ಟಿ ರಂಗಸ್ವಾಮಿ. 1 ನೇ ಪ್ರತಿವಾದಿ ನನ್ನ ಮೈದುನ. ನನ್ನ ಗಂಡ, 1 ನೇ ಪ್ರತಿವಾದಿ ಮತ್ತು ವಾದಿಗೆ ಅಣ್ಣಯ್ಯ ಹಾಗೂ ಕೆಂಪಮ್ಮ ರವರು ಮುತ್ತಾತ, ಮುತ್ತಜ್ಜಿ ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ಮುತ್ತಾತ, ಮುತ್ತಜ್ಜಿಯ ಹೆಸರು ಗೊತ್ತಿಲ್ಲ. ನನ್ನ ಗಂಡ ದಿಃ 09.05.2014 ರಂದು ಮರಣಗೊಂಡರು. ಅಣ್ಣಯ್ಯ ಮತ್ತು ಕೆಂಪಮ್ಮ ರವರಿಗೆ ದೊಡ್ಡಪ್ಪ ಮತ್ತು ಸಣ್ಣಪ್ಪ ಎಂಬ ಇಬ್ಬರು ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ನನ್ನ ಗಂಡನ ತಾತನ ಹೆಸರು ಗೊತ್ತಿಲ್ಲ. ನನ್ನ ಮದುವೆ ಕಾಲಕ್ಕೆ ನನ್ನ ಗಂಡನ ತಂದೆ ತಾಯಿ ಬದುಕಿದ್ದರು. ನನ್ನ ಗಂಡನ ತಾತ, ಅಜ್ಜಿ ಬದುಕಿರಲಿಲ್ಲ. ನನ್ನ ಗಂಡನ ಮುಖಾಂತರ ಅವರ ತಾತ, ಅಜ್ಜಿಯ ಹೆಸರನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸಲಿಲ್ಲ. ಅಣ್ಣಯ್ಯ ರವರ ಮಗ ಸಣ್ಣಪ್ಪ ರವರ ಹೆಂಡತಿಯ ಹೆಸರು ಗೊತ್ತಿಲ್ಲ. ಸಣ್ಣಪ್ಪ ರವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಸಣ್ಣಪ್ಪ ರವರಿಗೆ ಪಾಪಯ್ಯ ಎಂಬ ಒಬ್ಬರೇ ಮಗ ಎಂದರೆ ಸಾಕ್ಷಿಯು ಸಣ್ಣಪ್ಪ ರವರು ಗೊತ್ತಿಲ್ಲ, ಆದರೆ ಪಾಪಯ್ಯ ರವರು ಗೊತ್ತು ಎಂದು ನುಡಿಯುತ್ತಾರೆ. ಪಾಪಯ್ಯ ರವರ ಮಗ ಹೆಚ್ ಪಿ ರಂಗಸ್ವಾಮಿ ಎಂದರೆ ಸರಿ.

2. ವಾದಿಯು ಸ. ನಂ. 55/10 ಹಾಗೂ 55/22 ಕ್ಕೆ ಈ ದಾವೆ ಹೂಡಿದ್ದಾರೆ. ನನ್ನ ಮದುವೆಗೆ ಮುನ್ನ ದಾವಾ ಸ್ವತ್ತು ದೊಡ್ಡಪ್ಪ ಮತ್ತು ಸಣ್ಣಪ್ಪ ರವರ ಜಂಟಿ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರು ಮರಣಗೊಂಡ ನಂತರ ಅವರ ಮಕ್ಕಳಾದ ತಿಮ್ಮಯ್ಯ ಮತ್ತು ಪಾಪಯ್ಯ ರವರ ಜಂಟಿ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರು ತೀರಿಕೊಂಡ ನಂತರ ದಾವಾ ಸ್ವತ್ತುಗಳು ನನ್ನ ಗಂಡ, 1 ಪ್ರತಿವಾದಿ ಮತ್ತು ವಾದಿಯ ಜಂಟಿ ಮಾಲೀಕತ್ವ ಮತ್ತು ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

3. ನನ್ನ ಮುಖ್ಯ ವಿಚಾರಣೆಯಲ್ಲಿರುವ ಅಂಶಗಳು ಗೊತ್ತು. ಅದಕ್ಕೆ ನಾನೇ ಮಾಹಿತಿಯನ್ನು ನೀಡಿದ್ದೇನೆ. ನನ್ನ ಲಿಖಿತ ವಾದ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ.

(ಮುಂದುವರೆದ ಪಾಟೀಸವಾಲನ್ನು ವಾದಿಯ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು)

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**